ಸೂರ್ಯನಾರಾಯಣನಿಗೆ ನಮಸ್ಕಾರ ಮಾಡುತಾನೆ... ಆಮೇಲೆ ಕೆಲಸ ಶುರುಮಾಡುತಾನೆ!!' ಅಮ್ಮ, ಎದುರಾದಾಗಲೆಲ್ಲ ನನ್ನೆದುರು ತಪಸ್ಸನ್ನು ಹೊಗಳತೊಡಗಿದಳು! 'ಏನು ಆಚಾರ ಅಂತೀನಿ... ಸಂಸ್ಕಾರವಂತ ಹುಡುಗ... ಪ್ರತೀ ಸೋಮವಾರ ಬೆಳಿಗ್ಗೆ ನನ್ನ ಕಾಲು ಮುಟ್ಟಿ ನಮಸ್ಕಾರ ಬೇರೆ ಮಾಡುತಾನೆ...'

ಅಯ್ಯೋ ಶಿವನೇ ಅಂದುಕೊಂಡೆ! ಅಮ್ಮನ ಈ ಪರಿ 'ತಪಸ್ಸ್ಪರ'ವಾಗಿಬಿಟ್ಟರೆ? ತಪಸ್ಸಿನ ಪರವಾದ ಈ ಪರಿ ತಾರೀಫು, ನನ್ನ ವಿರುದ್ಧದ ದೂಷಣೆಯೆಂತಲೇ ಅನ್ನಿಸತೊಡಗಿತು! ಮಾತುಮಾತಿಗೂ ತುಲನೆ! ಹೀಯಾಳಿಕೆ!!

'ಈಗ ನಾನೇನು ಮಾಡಬೇಕೂಂತೀಮ್ಮ?!' ಕನಲಿದೆ.

'ನಿನಗೇನು ಹೇಳೋಕಾಗುತ್ತೆ, ಹೇಳು! ದೊಡ್ಡ ಮನುಷ್ಯ ನೀನು! ಒಳ್ಳೆ ಶ್ವಪಚನ ಹಾಗಿರುತೀಯಾ... ದಿನಾ ಬೆಳಗ್ಗೆ ಎದ್ದ ಕೂಡಲೆ ಒಂದು ಸ್ನಾನಾಂತ ಮಾಡಬಾರದಾ? ದೇವರಿಗೊಂದು ದೀಪ ಹಚ್ಚಿ ಅಡ್ಡಬೀಳಬಾರಾದಾ?' ವರಾತ ಸುರುವಾಯಿತು. 'ಹೋಗಲಿ, ಜನಿವಾರನಾದರೂ ಇದೆ ತಾನೇ? ಇಲ್ಲಾ, ಅದನ್ನೂ ಕಳಚಿ ನೈವೇದ್ಯ ಮಾಡಿಬಿಟ್ಟೆಯಾ?!'

ಮಾತು ವಿಪರೀತವನ್ನು ತಲುಪುವ ಮೊದಲೇ, ಸುಮ್ಮನೆ ಪ್ರಮಾದವೇತಕ್ಕೆಂದು ಕುಳಿತಲ್ಲಿಂದೆದ್ದು ಕದಲಿದೆ!

ಈ ಸಣ್ಣಪುಟ್ಟದೇನೇ ಇದ್ದರೂ, ತಪಸ್ಸು ನಮ್ಮ ಮನೆ ಸೇರಿದ ಒಂಡೆರಡು ತಿಂಗಳಿಗೆಲ್ಲ, ನಮ್ಮ ಅಡುಗೆಮನೆಯ ದಿನಚರಿಯೇ ಬದಲಿಹೋಯಿತು. ಬೆಳಿಗ್ಗೆ ಅಡುಗೆಮನೆ ಹೊಕ್ಕಳೆಂದರೆ ಕಾಫಿ ತಿಂಡಿ, ಕಸಮುಸುರೆ ಮುಗಿಯುವವರೆಗೂ ಯಾವೊತ್ತೂ, ಮೈಗೆ ನೀರು ಸೋಕಿಸದಿದ್ದ ಈಶ್ವರಿ, ಇದ್ದಕ್ಕಿದ್ದಂತೆ, ಎಂಥದೋ 'ತಪೋ'ಮಹಿಮೆಗೀಡಾದವಳಂತೆ, ಮುಂಜಾನೆ ಹಾಸಿಗೆಯಿಂದೆದ್ದಿದ್ದೇ ಮಿಂದು ಮಡಿಯಾದ ಮೇಲಷ್ಟೇ ಒಲೆ ಹಚ್ಚತೊಡಗಿದಳು! ಅದೂ ತನ್ನಿಂತಾನೇ! ನಾನಾಗಲೀ ನನ್ನ ಹೆಂಡತಿಯಾಗಲೀ ಹೇಳದೆಯೆ!! ಒಮ್ಮಿಂದೊಮ್ಮೆ ಈ ಪರಿ ಬದಲಾವಣೆಯೆ? ಆಶ್ಚರ್ಯವಾಯಿತು! 'ಏನು ಮಾಡೋದು ಹೇಳಿ, ಸರ್... ನಾನು ಸ್ನಾನ ಮಾಡದೆ ಕಾಫಿ ತಿಂಡಿ ಮಾಡುತೀನೀಂತ, ಹುಡುಗ ಮಧ್ಯಾಹ್ನದ ಊಟದ ತನಕ ಉಪಾಸ ಇರುತಾನೆ... ಪಿಚ್ಚನಿಸುತ್ತೆ... ಅಷ್ಟೆಲ್ಲ ಕೆಲಸ ಮಾಡುತಾನೆ; ಉಪಾಸ ಇದ್ದರೆ ಹೊಟ್ಟೆ ಕೇಳಬೇಕಲ್ಲ? ಪಾಪದ ಹುಡುಗಾ, ಸರ್... ಒಂದರ್ಧ ಗಂಟೆ ಮುಂಚೆ ಏಳೋದರಿಂದ ನನ್ನ ಗಂಟೆಲ್ಲಿಹೋಗುತ್ತೆ? ಅದಕ್ಕೇ ಐದೂವರೆಗೇ ಎದ್ದು ಸ್ನಾನ ಮಾಡಿಕೊಂಡು ಬರುತೀನಿ...' ಈಶ್ವರಿ ಕಾರಣ ಕೊಟ್ಟಳು.

'ಅಲ್ಲಾ, ಈಶ್ವರೀ...' ಹೆಂಡತಿ ರೇಗಿದಳು. '...ನಾವಿಬ್ಬರೂ ಜಿಮ್ಮಿಗೆ ಹೋಗೋಕೆ ಮುಂಚೆಯೇ ಎದ್ದು ಒಂದು ಲೋಟ ಟೀ ಮಾಡಿಕೊಡು ಅಂತ ಸಾವಿರಾರು ಸರ್ತಿ ಹೇಳಿದೀನಿ. ಅದಾಗಲಿಲ್ಲ... ಈಗ ಇವೊತ್ತು ನಿನ್ನೆ ಬಂದವನ ಮೇಲೆ ನಿನಗೆ ಪಾಪ ಅನಿಸುತ್ತೆ ಅಲ್ಲವಾ! ನಮ್ಮಿಬ್ಬರ ಮೇಲೆ ಯಾವೊತ್ತಾದರೂ ನಿಮಗೆ ಪಾಪ ಅನಿಸಿದೆಯೇನೇ... ಛೇ!!'

ಕಾದೆಣ್ಣೆಯೊಳಗಿಳಿದು ಅರಳಿದ್ದ ಹಪ್ಪಳದಂತಹ ಈಶ್ವರಿಯ ಮೋರೆ ಮುದುಡಿ ಕಟಕಲಾಯಿತು! 'ಹಂಗಲ್ಲ ಮೇಡಂ...' ಎಂದು ಸುರುಮಾಡಿದವಳು, ಮುಂದೆ ಮಾತು ತೋಚದೆ ತತ್ತತ್ತಪತ್ತತ್ತ–ಗೈದಳು!

'ಇದು ಹಾಗೇ, ಈಶ್ವರೀ... ಸಂಬಳ ಕೊಡೋರು ಅಂದರೆ ನಿಮಗೆಲ್ಲ ಸಸಾರ...' ಅನ್ನುತ್ತಿರುವಾಗ ನನ್ನ ಹೆಂಡತಿಗೆ ಅಳು ಮುಂದಾಗಿಬಂತು. ಆಫೀಸಿಗೆ ಹೋಗುವ ಅವಾಂತರದಲ್ಲಿದ್ದ ನಾನು ಅವಳನ್ನು ಸಮಾಧಾನಿಸುವುದಾಯಿತು. 'ಇವನು ಬಂದ ಮೇಲೆ